ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ನೇಮಕಾತಿ ಸಮಿತಿ ರಚಿಸುವುದು.

2217(2745) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) :— ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರಕಾರಿ ಕೈಗಾರಿಕಾ ಕೇಂದ್ರಗಳಲ್ಲಿ ತರಬೇತಿಗೆ ನೇಮಕಾತಿ ಮಾಡಿಕೊಳ್ಳಲು ಸಮಿತಿಗಳನ್ನು ರಚಿಸಲಾಗಿದೆಯೇ;

ಆ) ಸಮಿತಿಗಳು ರಚನೆಯಾದರೆ ನ್ಯಾಯಯುತವಾಗಿ ಎಲ್ಲ ವಿದ್ಯಾರ್ಥಿಗಳಿಗೆ ಪ್ರವೇಶ ಸಿಗುವುದು ತಮ್ಮ ಗಮನಕ್ಕೆ ಬಂದಿದೆಯೆ;

ಇ) ಪ್ರಸಕ್ತ ಸಾಲಿನಿಂದ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ನೇಮಕಾತಿ ಸಮಿತಿ ರಚಿಸಲಾಗುತ್ತಿದೆಯೆ;

ಈ) ಇಲ್ಲವಾದಲ್ಲಿ ಕಾರಣವೇನು?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :—

ಅ) ಇಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಇಲ್ಲ.

ಈ) ಸರ್ಕಾರಿ ಆದೇಶ ಸಂಖ್ಯೆ ಕಾ: ಇ 12 ಇಟಿಐ 97, ದಿನಾಂಕ 28-7-97ರಲ್ಲಿ ಸಮಿತಿಗಳನ್ನು ರದ್ದುಗೊಳಿಸಿ ಎಸ್.ಎಸ್.ಎಲ್.ಸಿ. ಪಿ.ಯು.ಸಿ. (10+2) ಮೆರಿಟ್-ಕಂ ರಿಸರ್ವೇಶನ್ ಪ್ರಕಾರ ನೇಮಕಾತಿ ಮಾಡುವುದನ್ನು ಜಾರಿಗೊಳಿಸಿದೆ.

ರಾಷ್ಟ್ರೀಯ ಹೆದ್ದಾರಿಗಳ ದುರಸ್ತಿ.

2218(2720) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ರಾಜ್ಯ ಹೆದ್ದಾರಿಗಳು ಹಾಗೂ ಸೇತುವೆಗಳ ನಿರ್ಮಾಣಕ್ಕೆ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳು ಯಾವುವು;

2. ಈ ಯೋಜನೆಗಳಿಗೆ ಎಷ್ಟು ಹಣ ಬೇಕಾಬಹುದೆಂದು ಅಂದಾಜು ಮಾಡಲಾಗಿದೆ;

3. ಈ ಯೋಜನೆಗಳಿಗಾಗಿ ಸರ್ಕಾರ ಹಣವನ್ನು ಯಾವ ಮೂಲದಿಂದ ಪಡೆಯಲಾಗುವುದು; ಮತ್ತು ಎಷ್ಟು ಸಾಲವನ್ನು ಪಡೆಯಲಾಗುವುದು;

4. ರಾಜ್ಯ ಹೆದ್ದಾರಿ ಮತ್ತು ಸೇತುವೆ ನಿರ್ಮಾಣ ಕಾರ್ಯವನ್ನು ಯಾರಿಗೆ ವಹಿಸಲಾಗಿದೆ; ಇಲ್ಲಿಯವರೆಗೂ ಈ ಯೋಜನೆಗಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ ಎಷ್ಟು ಸೇತುವೆಗಳು ಪೂರ್ಣಗೊಂಡಿವೆ;

5. ರಾಜ್ಯದ ಹೆದ್ದಾರಿಗಳು ಹಳ್ಳ ಮತ್ತು ಗುಂಡಿಗಳಿಂದ ಕೂಡಿದ್ದು ವಾಹನಗಳ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

1. ರಾಜ್ಯ ಹೆದ್ದಾರಿಗಳ ಹಾಗೂ ಸೇತುವೆಗಳ ನಿರ್ಮಾಣಕ್ಕೆ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

2	ರಾಜ್ಯ ಹೆದ್ದಾರಿ ಹಾಗೂ ಸೇತುವೆಗಳು	ಬೇಕಾಗಿರುವ ಅಂದಾಜು ಹಣ ಕೋ. ರೂ.
೧	೭೩೩೭ ರಾಜ್ಯ ಹೆದ್ದಾರಿಗಳಿದ್ದು ೩ ವರ್ಷದ ನಿರ್ವಹಣೆಗಾಗಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಮತಿಯಿಂದ ಟೆಂಡರ್ ಮೂಲಕ ಕೈಗೊಳ್ಳಲಾಗಿದೆ.	೨೫೦.೦೦
೨	೧೫೩ ಸೇತುವೆಗಳ ನಿರ್ಮಾಣ ಸಹ ಕೆಆರ್‌ಡಿಸಿಎಲ್ ಮತಿಯಿಂದ ಕೈಗೊಳ್ಳಲಾಗಿದೆ.	೯೫.೦೦
೩	೬೨೦ ಕಿ.ಮೀ. ಉದ್ದದ ನಾಲ್ಕು ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲು ಯೋಜಿಸಿದೆ.	೬೦೦
೪	೨೩೦೦ ಕಿಮೀ. ಆಯ್ದ ರಾಜ್ಯ ಹೆದ್ದಾರಿಗಳನ್ನು ವಿಶ್ವ ಬ್ಯಾಂಕಿನ ಸಾಲದ ನೆರವಿನೊಂದಿಗೆ ಅಭಿವೃದ್ಧಿಪಡಿಸಲು ಯೋಚಿಸಿದೆ.	೨೦೩೩.೦೦

ಇದಲ್ಲದೆ 75 ಕೋಟಿ ರೂ.ಗಳ ಕಾರ್ಯಕ್ರಮದಲ್ಲಿ ಹಲವು ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದ್ದು ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದೆ.

3. ಈ ಯೋಜನೆಗೆ ಹುಡ್ಕೋ ಸಂಸ್ಥೆ ಮತ್ತು ವಿಶ್ವ ಬ್ಯಾಂಕಿನ ವತಿಯಿಂದ ಸಾಲ ಪಡೆಯಲಾಗುವುದು

ಹುಡ್ಕೋ ಸಂಸ್ಥೆಯಿಂದ ಸಾಲ	900 ಕೋಟಿ ರೂ.
ವಿಶ್ವಬ್ಯಾಂಕಿನಿಂದ ಸಾಲ	1637 ಕೋಟಿ ರೂ.

4. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ರಾಜ್ಯ ಹೆದ್ದಾರಿಗಳ 3 ಸಾಲಿನ ನಿರ್ವಹಣೆಯನ್ನು ಜಿಲ್ಲಾವಾರು ಗುತ್ತಿಗೆಯನ್ನು ಮಹಿಸಿದ ಹಾಗೂ 153 ಸೇತುವೆಗಳ ನಿರ್ಮಾಣ ಕಾರ್ಯವನ್ನು 4 ಪ್ಯಾಕೇಜ್ ಮೂಲಕ ನಾಲ್ಕು ಗುತ್ತಿಗೆ ಸಂಸ್ಥೆಗಳಿಗೆ ವಹಿಸಲಾಗಿದೆ. ಈ ಯೋಜನೆಗಳಿಗೆ ಇಲ್ಲಿಯವರೆಗೆ 55 ಕೋಟಿ ರೂ.ಗಳನ್ನು ಖರ್ಚು ಮಾಡಿದೆ. 95 ಸೇತುವೆಗಳ ನಿರ್ಮಾಣ ಪೂರ್ಣಗೊಂಡಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

5. ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ನಿರ್ವಹಣೆಯ ಅವಶ್ಯಕತೆ ಸರ್ಕಾರದ ಗಮನಕ್ಕೆ ಬಂದಿದ್ದು ಈ ದಿಶೆಯಲ್ಲಿ ಈಗಾಗಲೇ 3 ಸಾಲಿನ ನಿರ್ವಹಣೆ ಕಾಮಗಾರಿಗಳನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಪ್ರಾರಂಭಿಸಿದೆ. ವಿಶ್ವ ಬ್ಯಾಂಕಿನ ಯೋಜನೆಯ ಕಾಮಗಾರಿಗಳು ಅಕ್ಟೋಬರ್ 2001 ರಲ್ಲಿ ಪ್ರಾರಂಭಿಸಲು ಯೋಜಿಸಿದೆ.

KARNATAKA ROAD DEVELOPMENT

Statement showing the details of entrustment of works

Sl. No.	Circle	Division	Agency
I	Bangalore	Bangalore	Sree Durga Constructions, Mysore
		Tumkur	M/s. National Asphalt Products & Const. Co., Bangalore
		Kolar	M/s. Tarmat Infrastructural & Engineers (P) Ltd., - Mumbai
II	Shimoga	Shimoga	M/s. Prathiba Constructions, Kolhapur
		Davangere	Sri. A Kondaiah, Davangere
		Chitradurga	Sri Balaram Reddy, Chitradurga
III	Hassan	Hassan	M/s. Vishal Infrastructure Ltd., Jayanagar, Bangalore
		Chikka-magalur	M/s.Sanz Constructions Ltd., Jayanagar, Bangalore
IV	Mangalore	Mangalore	Sri Shankar Shetty, Kinnigoli
		Udupi	Sri. P.B. Ibrahim, Bhatkal
		Kodagu	Sri. R. Chinnaswamy, Kodagu
V	Mysore	Mysore	Sri Govinda Gowda, Mysore
		Mandya	Sri Srinath Reddy, Chittor
		Chamraj-Nagar	Sri Chandrashekaraiha, Mysore
VI	Gulbarga	Bidar	M/s. R.K. Engineers, Hyderabad

CORPORATION LIMITED

of State Highway Maintenance & Status

Lenght in Km.	Entrusted Cost (Rs. in Lakhs)	Approval letter of KRDCL	Date of Agreement	Status/ Remarks
457.50	1262.00	11-05-01	01-06-01	Started
381.20	1192.78	03-03-01	14-03-01	Started
433.70	1332.79	28-02-01	20-04-01	Started
381.45	1081.00	11-05-01	16-05-01	Started
173.00	666.58	03-03-01	07-03-01	Started
335.80	1280.99	03-03.01	07-03-01	Started
384.90	1848.89	30-03-01	07-04-01	S arted
241.70	1065.95	30-03-01	31-03-01	S arted
337,58	789.00	11-05-01	16-05-01	Started
283.10	892.29	30-03-01	18-04-01	Started
310.84	396.00	11-05-01	16.05.01	Started
194.66	618.42	11-05-01	16-05-01	Started
115.05	364.06	30-03-01	18-04-01	Started
93.60	165.00	11-05-01	16-05-01	Started
216.40	643.12	02-04-01	19-04-01	Started

1	2	3	4
		Gulbarga	M/s. Stellar Projects Private Limited, Hyderabad
		Yadgir	M/s. Surya Construction - Hyderabad
VII	Belgaum	Belgaum	H.P. Madhukar Engineers & Contractors, Hubli
		Bijapur	Sri. S.B. Patil, Bijapur
		Bagalkot	Sri. P. Sudhakar, Davangere
VIII	Dharwad	Dharwad	Sri. N.S. Nayak & Sons, Hubli
		Haveri	M/s. Madhu Constructions-Bellary
		Gadag	M/s. S.D. Reddy - Dharwad
		Uttar Kannada	Agency to be finalized
IX	Bellary	Raichur	M/s. Surya Constructions, Hyderabad
		Koppal	Sri Navali Hiremath, Koppal
		Bellary	Sri. P. Prabhakar Reddy, Raichur
			Total

5	6	7	8	9
366.40	1403.00	03-03-01	13-03-01	Started
205.50	857.97	03-03-01	07-03-01	Started
465.90	1468.00	11-05-01	14-05-01	Started
226.40	631.00	03-03-01	07-03-01	Started
180.84	532.02	03-03-01	07-03-01	Started
110.65	243.0	11-05-01	16-05-01	Started
199.97	388.73	03-03-01	--	Legal Dispute
176.65	404.00	03-03-01	09-03-01	Started
444.60	---	---	---	Not Started
173.20	454.48	03-03-01	07-03-01	Started
207.60	355.88	03-03-01	26--3-01	Started
238.85	515.49	28-02-01	08-03-01	Started
7337.04	**20862.44**			

153 BRIDGES OF KARNATAKA ROAD DEVELOPMENT CORPN. LTD.,

L.A ON. No.2720

Pakage	- I	39 Nos	M/s. L & T Company
	- II	37 "	M/s. Sommon India Ltd.,
	- III	34 "	M/s. Nagarjuna Constn. Co. Ltd.,
	- IV	43 "	M/s. Nandi Engineering Ltd.,
	Total	153 Nos	

ಅರಣ್ಯ ಪ್ರದೇಶಗಳನ್ನು ಬೆಳೆಸಲು ಹಮ್ಮಿಕೊಂಡಿರುವ ಯೋಜನೆಗಳು

2219(2721) ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಅರಣ್ಯ ಪ್ರದೇಶಗಳನ್ನು ಬೆಳೆಸಲು ಸರ್ಕಾರ ಯಾವುದಾದರೂ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆಯೇ? ಹಾಗಿದ್ದಲ್ಲಿ ವಿವರ ನೀಡುವುದು.

ಆ) ಕಳೆದ ವರ್ಷ ಅರಣ್ಯ ಪ್ರದೇಶ ಬೆಳೆಸಲು ಸಸಿಗಳನ್ನು ನೆಡುವ ನಿಟ್ಟಿನಲ್ಲಿ ಸರ್ಕಾರ ಎಷ್ಟು ಹಣವನ್ನು ಖರ್ಚು ಮಾಡಿದೆ ಮತ್ತು ಎಷ್ಟು ಸಸಿಗಳನ್ನು ನೆಡಲಾಗಿದೆ; ಜಿಲ್ಲಾವಾರು ಮಾಹಿತಿ ನೀಡುವುದು;

ಇ) ನೈಸರ್ಗಿಕ ಹಾಗೂ ಮಾನವ ಮೂಲದಿಂದ ಪ್ರತಿ ವರ್ಷ ಎಷ್ಟು ಅರಣ್ಯ ಪ್ರದೇಶ ನಾಶವಾಗುತ್ತಿದೆ;

ಈ) ಈ ಅಸಮತೋಲನವನ್ನು ಕಾಯ್ದುಕೊಳ್ಳಲು ಶೇಕಡ ಎಷ್ಟರಷ್ಟು ಅರಣ್ಯ ಪ್ರದೇಶವನ್ನು ಹೊಸದಾಗಿ ಬೆಳೆಸಬೇಕಾಗುತ್ತದೆ;

ಉ) ಇದಕ್ಕಾಗಿ ಯಾವುದಾದರೂ ವೈಜ್ಞಾನಿಕ ವಿಧಾನದಿಂದ ವರದಿ ತಯಾರಿಸಲಾಗಿದೆಯೇ; ಹಾಗಿದ್ದಲ್ಲಿ ವಿವರ ನೀಡುವುದು?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :—

ಅ) ಹೌದು